

ರಿಗಾ ನಗರದ ಪಕ್ಷಿನೋಟ

ಒಬ್ಬರಿನ್ನೊಬ್ಬರ ಜೊತೆ ಮಾತಾಡುವ ಪ್ರಮೇಯವೇ ಇಲ್ಲ, ಹತ್ತಿದ ತಕ್ಷಣ ಮೊಬೈಲ್ ಹಿಡಿಯುವವರೇ ಎಲ್ಲ. ಒಂದಷ್ಟು ದೂರ ಪಯಣಿಸುತ್ತಾ ಸುತ್ತಲ ದೃಶ್ಯಗಳನ್ನು ಕಣ್ತುಂಬಿಕೊಂಡೆವು. ಹೆಚ್ಚು ಎತ್ತರವಿರದ ಕಟ್ಟಡಗಳು, ಅಲ್ಲಲ್ಲಿ ಹೂಗಳು, ಹಸುರು ತುಂಬಿದ ಪಾರ್ಕುಗಳು ಗೋಚರವಾದವು. ಎರಡು ಸೇತುವೆಗಳ ನಡುವೆ ತಣ್ಣಗೆ ಮಲಗಿದ ಡೌಗವಾ ನದಿ ಕಂಡಿತು. ನದಿ ದಂಡೆಯಲ್ಲಿ ಬೆಂಚುಗಳು, ಪಾರ್ಕ್ ಕಾಣಿಸಿತು. ಬಸ್‌ನಿಂದ ಇಳಿದು ಅಡ್ಡಾಡಿ ಒಂದೆಡೆ ಕೂತು ಬುತ್ತಿ ತೆಗೆದು ಉಂಡೆವು.

ಊಟದ ನಂತರ, ಕಂಬಕ್ಕೆ ನೇತು ಹಾಕಿದ ಬೋರ್ಡ್‌ಗಳನ್ನೆಲ್ಲ ಓದಿದೆವು. ನಾವು ತಲುಪಬೇಕಾದ ಸ್ಥಳಕ್ಕೆ ಯಾವ ಬದಿಯ ಟ್ರಾಮ್ ಹತ್ತಬೇಕು, ಎಷ್ಟು ಸ್ಟಾಪ್, ಯಾವ ಸ್ಟಾಪ್‌ನಲ್ಲಿ ಇಳಿಯಬೇಕೆಂಬುದನ್ನು ಇಬ್ಬರೂ ಲೆಕ್ಕ ಹಾಕಿದೆವು, ಮೂರು ಮೂರು ಬಾರಿ ಆ ಸ್ಟಾಪ್‌ಗಳ ಹೆಸರು ಮನನ ಮಾಡಿಕೊಂಡೆವು.

ಅಂತೂ ನಮ್ಮ ಮನೆ ನಂಬರ್ ಹುಡುಕಿದಾಗ ನಿಗದಿತ ಸಮಯಕ್ಕೆ ಇನ್ನೂ ಹತ್ತು ನಿಮಿಷ ಬಾಕಿ ಇತ್ತು. ಮೊದಲ ಮಹಡಿಯ ಆ ಮನೆಯೊಳಗಿನಿಂದ ಜೋರಾದ ಸಂಗೀತ ಕೇಳಿಸಿತು. ಬಾಗಿಲು ಬಡಿದರೆ ಯುವಕನೊಬ್ಬ ಜಾಸ್ ಹಾಡು ಕೇಳುತ್ತ ಮನೆ ಸ್ವಚ್ಛಗೊಳಿಸುತ್ತಿದ್ದ. ಕೆಳಗೆ ಮನೆಯ ಎದುರಿಗಿದ್ದ ಸೇಬಿನ ಮರದಡಿಯಲ್ಲಿದ್ದ ಕುರ್ಚಿಗಳನ್ನು ತೋರಿದ. ಮರದ ಮೇಲೆ ಸೇಬು ತೂಗಾಡುತ್ತಿದ್ದವು, ಕೆಳಗೆ ಒಂದಿಷ್ಟು! ಒಂದೆರಡನ್ನು ಆರಿಸಿ ಆರಾಮಾಗಿ ಕೂತು ತಿನ್ನುವಷ್ಟರಲ್ಲಿ ಆತ ಮರಳಿ ಬಂದ. ಕೈಲಿದ್ದ ಕಸದ ಚೀಲಗಳನ್ನು ತನ್ನ ಕಾರಿನ ಡಿಕ್ಕಿಗೆ ಹಾಕಿ ನಮ್ಮ ಬಳಿ ಬಂದು ಕೀ ಕೊಟ್ಟ. ಕೀ ಹಾಕಿಡುವ ಬಾಕ್ಸನ್ನೂ ತೋರಿದ. ಆಗಲೇ ಗೊತ್ತಾಗಿದ್ದು ಆತ ಮನೆ ಮಾಲೀಕ ಎಂದು!

ಮನೆಯೊಂದರ ಸಕಲ ಸವಲತ್ತುಗಳನ್ನೂ ಹುದುಗಿಸಿಕೊಂಡ ಚಿಕ್ಕ ಚೊಕ್ಕ ಒಂದು ರೂಮಿನ ಅಪಾರ್ಟ್‌ಮೆಂಟ್ ಅದು. ಅಡುಗೆ ಕಪಾಟಿನಲ್ಲಿ ಹತ್ತಾರು ಬಗೆಯ ಚಾಕು, ಚಮಚಗಳು, ನಾಲ್ಕೇ ಪಾತ್ರೆ, ಜೊತೆಗೆ ಕನಿಷ್ಠ ಮಸಾಲೆ ಪದಾರ್ಥಗಳು, ಕಾಫಿ ಪುಡಿ ನೀಟಾಗಿ ಜೋಡಣೆಯಾಗಿದ್ದವು. ಸಮೀಪದ ಸೂಪರ್ ಮಾರ್ಕೆಟ್‌ಗೆ ಹೋಗಿ ಹಲವು ಪದಾರ್ಥಗಳನ್ನು ಖರೀದಿಸಿದೆವು. ಇಡೀ ಪ್ರವಾಸದಲ್ಲಿ ಬುಲ್ಗೂರ್, ತರಕಾರಿ ಮತ್ತು ಮಸೂರ್ ದಾಲ್ ಬೇಯಿಸಿ ಒಗ್ಗರಣೆ ಕೊಟ್ಟ ಅಡುಗೆ ನಮ್ಮ ಹೊಟ್ಟೆಗೆ.

ಅಲ್ಲಿನ ರಸ್ತೆಗಳಲ್ಲಿ ಜಾಹೀರಾತು ಬೋರ್ಡ್‌ಗಳ ಹೆಚ್ಚಿನ ಹಾವಳಿ ಇಲ್ಲ. ಅಲ್ಲಲ್ಲಿ ಕಾಫಿ ಹೌಸ್, ಎಪೊಟೆಕ್ (ಮೆಡಿಕಲ್ ಸ್ಟೋರ್), ಡೆಂಟಿಸ್ಟ್ ತಲೆ ಎತ್ತಿ ನೋಡಿದರೆ ಬಸ್ ಟ್ರಾಮ್‌ಗಳ ವಿದ್ಯುತ್ ವೈರ್ ಜಾಲ. ಎಲೆಕ್ಟ್ರಿಕ್ ಲೈನ್‌ಗೆ ಕಿರೀಟ ಜೋಡಿಸಿಕೊಂಡು ಓಡಾಡುವ ಟ್ರಾಮ್‌ಗಳನ್ನು ನೋಡುತ್ತಿದ್ದರೆ ನಮ್ಮಲ್ಲಿ ಕೋಡುಗಳಿಗೆ ಸಿಂಗಾರ ಮಾಡಿದ ಎತ್ತುಗಳ ನೆನಪಾಗುತ್ತದೆ. ಚಳಿಯಲ್ಲಿ ದಪ್ಪನೆಯ ಕೋಟು ಹಾಕುವ ಯೂರೋಪಿನ ಜನ ಬೇಸಿಗೆ ಬಂತೆಂದರೆ ಅಷ್ಟೇ ಸಹಜವಾಗಿ ಕನಿಷ್ಠ ಬಟ್ಟೆ ಧರಿಸಿ ಓಡಾಡುತ್ತಾರೆ.

ಮರುದಿನ ಬೆಳಿಗ್ಗೆ ಟ್ರಾಮ್ ಹತ್ತಿ ಕೂತೆವು. ರಿಗಾ ಓಲ್ಡ್ ಟೌನ್‌ನ ಫ್ರೀ ವಾಕಿಂಗ್ ಟೂರ್ ಅಂದಿನ ನಮ್ಮ ಕಾರ್ಯಕ್ರಮ. ಯೂರೋಪ್‌ನ ದೇಶಗಳ ಪ್ರಮುಖ ನಗರಗಳಲ್ಲಿ ಫ್ರೀ ವಾಕಿಂಗ್ ಟೂರ್ ಸೌಲಭ್ಯ ಇದೆ. ನಿಗದಿತ ಸ್ಥಳಗಳಲ್ಲಿ ಗುಂಪುಗೂಡಿ ಸೇರಿದ ಜನರಿಗೆ ನಗರದ ಒಂದೆರಡು ಕಿ.ಮೀ. ಸುತ್ತಾಡಿಸುತ್ತ ಇತಿಹಾಸ ಹೇಳುತ್ತ ಕೊನೆಯಲ್ಲಿ ಪ್ರವಾಸಿಗರು ಕೊಟ್ಟಷ್ಟೇ ಟಿಪ್ ಹಣವನ್ನು ಸಂತೋಷದಿಂದ ಸ್ವೀಕರಿಸುವ ಗೈಡ್‌ಗಳು ಮಳೆ, ಚಳಿ ಎಲ್ಲದಕ್ಕೂ ರೆಡಿಯಾಗಿ ಗುರುತಿನ



ಲಾಟ್ವಿಯಾದ ನ್ಯಾಷನಲ್ ಲೈಬ್ರರಿಯ ಮನಸೆಳೆಯುವ ವಿನ್ಯಾಸ

